ಗಮನ ಸೆಳೆಯುವ ಸೂಚನೆ

೧) ಹೊನ್ನಾವರ ತಾಲ್ಲೂಕಿನಲ್ಲಿ ಮಂಕಿ ಮಂಡಲ್ ಪಂಚಾಯ್ತಿಗೆ ಕುಡಿಯುವ ನೀರು ಸರಬರಾಜು ಮಾಡುವ ಯೋಜನೆ ಕೆಲಸ ಮುಗಿದು, ಉದ್ಘಾಟನೆ ಮಾಡಿದ ಕಾಲಕ್ಕೆ ನಳದಲ್ಲಿ ನೀರು ಬರದಿರುವ ಬಗ್ಗೆ.

ಶ್ರೀ ಆರ್. ಎನ್. ನಾಯಕ್ (ಭಟ್ಕಳ).—ಮಾನ್ಯ ಅಧ್ಯಕ್ಷರೇ, ಹೊನ್ನಾವರ ತಾಲ್ಲೂಕಿನಲ್ಲಿ ಮಂಕಿ ಮಂಡಲ ಪಂಚಾಯತ್‌ಗೆ ಕುಡಿಯುವ ನೀರು ಸರಬರಾಜು ಮಾಡುವ ಯೋಜನೆ ಕೆಲಸ ಮುಗಿದು ಉದ್ಘಾಟನೆ ಮಾಡಿದ ಕಾಲಕ್ಕೆ ನಳದಲ್ಲಿ ನೀರು ಬರದಿರುವುದರ ಬಗ್ಗೆ ಹಾಗೂ ಕಳಪೆ ಕೆಲಸ ಮಾಡಿರುವ ಬಗ್ಗೆ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳ ಗಮನ ಸೆಳೆಯುತ್ತೇನೆ

ಶ್ರೀ ಆರ್. ವಿ. ದೇಶಪಾಂಡೆ (ಕೃಷಿ ಸಚಿವರು)—ಮಾನ್ಯ ಅಧ್ಯಕ್ಷರೇ, ಮಂಕಿ ಗ್ರಾಮದ ನೀರು ಸರಬರಾಜು ಯೋಜನೆಯನ್ನು ರೂ. ೧೩,೮೪,೮೦೦ ಒಟ್ಟು ಮೊತ್ತದಲ್ಲಿ ಮಂಜೂರು ಮಾಡಲಾಗಿದ್ದು, ಈ ಯೋಜನೆಯನ್ನು ಜನವರಿ ೧೯೮೮ರಲ್ಲಿ ಪೂರ್ಣಗೊಳಿಸಲಾಗಿದೆ. ನೆಲಮಟ್ಟದ ಜಲಸಂಗ್ರಹಾಲಯದಿಂದ ಬರುವ ವಿತರಣಾ ಕೆಲಸದಲ್ಲಿ ಸ್ವಲ್ಪ ತೊಂದರೆ ಇದ್ದುದರಿಂದ, ೨-೪-೮೮ರಂದು ನೀರು ಕೊಳವೆ ಮೂಲಕ ಹರಿಯುವುದು ಸಾಧ್ಯವಾಗಿಲ್ಲ. ಈ ದಿನ ಪಂಚಾಯ್ತಿಯು ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಿಕೊಂಡಿದ್ದಿತು. ಈ ತೊಡಕನ್ನು ಸರಿಪಡಿಸಿ ಮರುದಿನವೇ ನೀರು ಸರಬರಾಜು ಮಾಡಲಾಗಿದೆ, ಇಂದಿಗೂ ಯಾವ ತೊಂದರೆ ಇಲ್ಲದೆ ನೀರು ಸರಬರಾಜು ಆಗುತ್ತಿದೆ ಮಾನ್ಯ ಸದಸ್ಯರು ಆರೋಪ ಮಾಡಿರುವಂತೆ ಅಲ್ಲಿ ಕಳಪೆ ಕೆಲಸ ಆಗಿಲ್ಲ ಅಥವಾ ಕಳಪೆ ಕೆಲಸವಾದ ಕಾರಣದಿಂದ ನಾನಕರನ್ನು ಆಹ್ವಾನಿಸಲಿಲ್ಲ, ಎಂಬುದು ಕೂಡ ಸತ್ಯಕ್ಕೆ ದೂರವಾದ ವಿಷಯ.

ಶ್ರೀ ಆರ್. ಎನ್. ನಾಯಕ್—ಇದರಲ್ಲಿ ೧೩ ಲಕ್ಷ ೮೪ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅಧ್ಯಕ್ಷರೇ, ಆ ದಿನದ ಸಮಾರಂಭಕ್ಕೆ ಜಿಲ್ಲಾ ಪರಿಷತ್ತಿನ ಅಧ್ಯಕ್ಷರು, ಉಪಾಧ್ಯಕ್ಷರು ಎಲ್ಲಾ ಬಂದಿದ್ದರು. ಓಪನ್ ಮಾಡುವ ದಿವಸ ಶಿರಂಗಿಸಿದರೆ ನೀರು ಬರಲೇ ಇಲ್ಲ. ಆಗ ನೀರು ಏಕೆ ಬರಲಿಲ್ಲ ಎನ್ನುವುದನ್ನು ನೋಡಬೇಕು. ಇವರು ಹೇಳಿರುವ ವಿಚಾರ ಸತ್ಯಕ್ಕೆ ದೂರ ಇದೆ. ಅಲ್ಲಿಯ ಜನ ನೀರಿಗಾಗಿ ಎಷ್ಟು ಕಷ್ಟಪಟ್ಟಿದ್ದಾರೆ ಎಂಬುದನ್ನು ತಾವು ನೋಡಬೇಕು. ನಳದಲ್ಲಿ ಆ ದಿನ ನೀರು ಬರಲಿಲ್ಲ, ಆ ನಳದಲ್ಲಿ ನೀರು ಬರಲಿಲ್ಲ. ಅಲ್ಲಿ ತುಂಬಾ ಕಳಪೆ ಕೆಲಸ ನಡೆದಿದೆ. ಹದಿಮೂರು ಲಕ್ಷ ರೂಪಾಯಿನಲ್ಲಿ ಅಷ್ಟು ದುಡ್ಡೂ ಖರ್ಚು ಮಾಡಲಿಲ್ಲ. ಅಲ್ಲಿರತಕ್ಕಂಥ ಅಸಿಸ್ಟೆಂಟ್ ಇಂಜಿನಿಯರ್ ಏನಿದ್ದಾರೆ ಅವರು ಉತ್ತರ ಕನ್ನಡ ಜಿಲ್ಲೆಯವರು, ಬಹಳ ವರ್ಷದಿಂದ ಇಲ್ಲೇ ಇದ್ದಾರೆ. ಯಾರ ಯಾರದ್ದೋ ಮಾರ್ಜಿಗೆ ಒಳಗಾಗಿ ಕೆಲಸ ಸರಿಯಾಗಿ ಮಾಡುತ್ತಿಲ್ಲ. ಅವರು ಇದೇ ಜಿಲ್ಲೆಯವರು ಎಂದು ಗೊತ್ತಿದ್ದರೂ ಸಹ ಮಾನ್ಯ ದೇಶಪಾಂಡೆಯವರು ಅವರನ್ನು ಆ ಜಿಲ್ಲೆಯಲ್ಲೇ ಇಟ್ಟುಕೊಂಡು ತಮ್ಮ ತಾಲ್ಲೂಕಿನಲ್ಲೇ ಇಟ್ಟುಕೊಂಡು ಬಹಳ ಕಾಲದಿಂದ ನೋಡಿಕೊಳ್ಳುತ್ತಿದ್ದಾರೆ. ಆ ಮನುಷ್ಯ ಒಳ್ಳೆಯ ಕೆಲಸ ಮಾಡುವವರಲ್ಲ, ಆದುದರಿಂದ ಇದರ ಬಗ್ಗೆ ಹೇಳಿಕೆ ಕೊಡಬೇಕು.

ಶ್ರೀ ಆರ್. ವಿ. ದೇಶಪಾಂಡೆ—ಅಲ್ಲಿ ಯಾರು ಇಂಜಿನಿಯರ್ ಇದ್ದಾರೆ ಅದು ನನಗೇ ಗೊತ್ತಿಲ್ಲ. ಬೇಕಾದರೆ ಅವರು ಹೆಸರು ಹೇಳಬಹುದು ಬಹಳಷ್ಟು ಜಿಲ್ಲೆಯಲ್ಲಿ ಬಹಳಷ್ಟು ಜನ ಆಯಾ ಜಿಲ್ಲೆಯ ಆಫೀಸರ್ಸ್ ಇದ್ದಾರೆ. ನೇರವಾಗಿ ಆ ಕೆಲಸದ ಬಗ್ಗೆ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಆ ಯಾವ ದಿನ ಉದ್ಘಾಟನೆ ಆಯಿತು ಆ ದಿನ ತಾಂತ್ರಿಕ ತೊಂದರೆಯಿಂದ ಇದರಲ್ಲಿ ನೀರು ಬರಲಿಲ್ಲ. ನೆಕ್ಸ್ಟ್ ಡೇಯಿಂದ ಅದರಲ್ಲಿ ನೀರು ಸರಬರಾಜಾಗುತ್ತಿದೆ. ಇವತ್ತಿನವರೆಗೂ ಬರುತ್ತಿದೆ, ಅದು ನಿಂತಿಲ್ಲ, ಯಾವ ದೂರೂ ಬಂದಿಲ್ಲ. ನಾನು ಜಿಲ್ಲಾ ಮಂತ್ರಿ ಆಗಿದ್ದೇನೆ. ಸಾಕಷ್ಟು ಸಲ ಜಿಲ್ಲೆಯಲ್ಲಿ ಪ್ರವಾಸ ಮಾಡಿದ್ದೇನೆ. ಮೊನ್ನೆ ತಾನೆ ಅಲ್ಲಿಗೆ ಹೋಗಿ ಬಂದಿದ್ದೇನೆ. ಇದರ ಬಗ್ಗೆ ಯಾವ ದೂರು ಬರಲಿಲ್ಲ. ಜಿಲ್ಲಾ ಪರಿಷತ್ ಮೀಟಿಂಗ್ ಅಟೆಂಡ್ ಮಾಡಿದ್ದೇನೆ. ಅಲ್ಲೂ ಏನೂ ದೂರು ಬರಲಿಲ್ಲ. ಈ ಇಂಜಿನಿಯರ್ ಬಗ್ಗೆ ಸ್ಪೆಸಿಫಿಕ್ ಆಗಿ ಏನಾದರೂ ಅಲಿಗೇಷನ್ಸ್ ಇದ್ದರೆ ನನ್ನ ಗಮನಕ್ಕೆ ತರಬಹುದು. ಸರಕಾರ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಆರ್. ಎನ್. ನಾಯಕ್.—ಇದೊಂದೇ ಅಲ್ಲ, ಈ ಎಂಜನಿಯರ್ ಮಾಡಿದ ಹಲವಾರು ಕೆಲಸಗಳ ಬಗ್ಗೆ ಸಾರ್ವಜನಿಕರಿಂದ ದೂರು ಬಂದಿದೆ. ಅದನ್ನು ನಾನು ಪತ್ರದೊಡನೆ ಲಗತ್ತಿಸಿ ಮಾನ್ಯ ಗ್ರಾಮೀಣ ಅಭಿವೃದ್ಧಿ ಮಂತ್ರಿಗಳಿಗೂ, ಪಿ.ಡಬ್ಲ್ಯೂ.ಡಿ. ಮಂತ್ರಿಗಳಿಗೂ ಕಳುಹಿಸಿಕೊಟ್ಟಿದ್ದೇನೆ. ಸರಕಾರದಿಂದ ಇವರಿಗೆ ಬಹಳ ಬಲವಾದ ರಕ್ಷಣೆ ಸಿಗುತ್ತಿದೆ. ಅವರು ತಪ್ಪು ಮಾಡಿದ್ದಾರೆ. ಈ ಯೋಜನೆಯನ್ನು ಉದ್ಘಾಟನೆ ಮಾಡಿದ ದಿವಸವೇ ನೀರು ಬರಲಿಲ್ಲ ಎಂದರೆ ಯಾರಾದರೂ ತಿಳಿದು ಕೊಳ್ಳಬಹುದು, ಎರಡು ದಿವಸ ಮುಂಚೆ ಇವರು ಪ್ರಾಯೋಗಿಕವಾಗಿ ನೋಡಿಲ್ಲ. ಮೊದಲೇ ಅದರಲ್ಲಿ ನೀರು ಬರುತ್ತದೋ ಇಲ್ಲವೋ ಎಂಬುದನ್ನು ನೋಡಬೇಕಾಗಿತ್ತು. ಉದ್ಘಾಟನೆ ಮಾಡಿದವರು ಜಿಲ್ಲಾ ಪರಿಷತ್ ಅಧ್ಯಕ್ಷರಿದ್ದಾರೆ. ಇಷ್ಟೆನ ದಿವಸ ಜಿಲ್ಲಾ ಪರಿಷತ್ ನೀರು ಕೊಡುವ ದೊಡ್ಡ ಜವಾಬ್ದಾರಿ ಇದೆ. ಉದ್ಘಾಟನೆ ಮಾಡಿದ ದಿವಸವೇ ನೀರು ಬರಲಿಲ್ಲ ಎಂದರೆ ಇದರ ಬಗ್ಗೆ ಎನ್‌ಕ್ವೈರಿ ಮಾಡಿರುತ್ತೀರಾ ? ಅಲ್ಲಿ ಉದ್ಘಾಟನೆಯಾದ ದಿವಸವೇ ನೀರು ಬಂದಿಲ್ಲ. ಅಲ್ಲಿ ಕಳಪೆ ಕೆಲಸ ನಡೆದಿದೆ ಅದಕ್ಕೆ ಹಾಕಿದ ಪೈಪ್, ಸ್ಯಾನಿಟೇಜರ್ಡ್ ಪೈಪ್ ಅಲ್ಲ, ಸಿಮೆಂಟ್ ಬದಲಾಗಿ ಹಾಕಿಲ್ಲ ಎಂಬುದರ ಬಗ್ಗೆ ಸೀರಿಯಸ್ ಆಗಿ ಬರೆದು ಮಾನ್ಯ ಮಂತ್ರಿಗಳಿಗೆ ಕಳುಹಿಸಿದ್ದರೂ, ಈ ತನಕ ಇದರ ಬಗ್ಗೆ ಯಾವುದೇ ಅಲಿಗೇಷನ್ಸ್ ಬಂದಿಲ್ಲ ಎಂದು ಹೇಳುತ್ತಾರೆ. ಏನು ಜನ ಬಂದು ನಿಮ್ಮ ಕಿವಿಯಲ್ಲಿ ಹೇಳುವುದಕ್ಕೆ ಆಗುತ್ತದೆಯೇ ?

ಅಧ್ಯಕ್ಷರು.—ಎನ್‌ಕ್ವೈರಿ ಮಾಡಿಸಿ ಎಂದು ಕೇಳಿ.

ಶ್ರೀ ಆರ್. ಎನ್. ನಾಯಕ್ —ಯಾವುದೇ ಜನ ಬಂದು ಜಿಲ್ಲಾ ಮಂತ್ರಿಯವರ ಕಿವಿಯಲ್ಲಿ ಮಾತನಾಡುವುದಿಲ್ಲ. ಕಿವಿಯಲ್ಲಿ ಮಾತನಾಡುವವರು ಬೇರೆ ಇದ್ದಾರೆ. ಅವರ ಮೇಲೆ ಆಕ್ಷನ್ ತೆಗೆದು ಕೊಳ್ಳಬೇಡಿ ಎಂದು ಹೇಳುವವರು ಬೇರೆ ಇದ್ದಾರೆ. ಅವರ ಹೆಸರು ಅಂಗೋಲೆಕರ್ ಎಂದು. ಅವರು ಅಂಕೋಲಾದವರು. ಇವರು ಮೊದಲು ದೇಶಪಾಂಡೆಯವರ ಕಾನ್‌ಸ್ಟಿಟ್ಯುಯೆನ್ಸಿಯಲ್ಲಿ ಕೆಲಸ ಮಾಡಿದ್ದಾರೆ. ಈಗ ನಮ್ಮಲ್ಲಿ ಬಂದಿದ್ದಾರೆ. ಅಲ್ಲಿಂದ ವರ್ಗ ಮಾಡಿ ಇಲ್ಲಿಗೆ ಹಾಕಿದ್ದಾರೆ.

ಅಧ್ಯಕ್ಷರು.—ಈಗ ಏನಾಗಬೇಕು ಕೇಳಿ.

ಶ್ರೀ ಆರ್. ಎನ್. ನಾಯಕ್.—ಈಗ ಏನಾಗಬೇಕು ಎಂದರೆ, ಅಲ್ಲಿ ಕಳಪೆ ಕೆಲಸ ಆಗಿದೆ. ಸರಿಯಾಗಿ ಕೆಲಸ ಆಗಲಿಲ್ಲ, ಅವರನ್ನು ಸಸ್ಪೆಂಡ್ ಮಾಡಿ ಎನ್‌ಕ್ವೈರಿ ಮಾಡಿ. ಏತಕ್ಕೆ ನೀರು ಬರಲಿಲ್ಲ ಎಂದು ಕೇಳಿ. ಅಲ್ಲಿ ಕೆಲಸ ಕಳಪೆ ಎಂಬುದನ್ನು ನಾನು ತೋರಿಸಿಕೊಡುತ್ತೇನೆ. ಪ್ರೂವ್ ಮಾಡುತ್ತೇನೆ. ಅಲ್ಲಿ ನೀರೇ ಬರಲಿಲ್ಲ.

ಶ್ರೀ ಬಿ. ಲಕ್ಕಪ್ಪ.—ಯಾಂತ್ರಿಕ ದೋಷದಿಂದ ನೀರು ಬರಲಿಲ್ಲವೋ ಅಥವಾ ಅಮೃತಸ್ತದ ದೋಷವೋ ಎಂಬುದನ್ನು ನೋಡಬೇಕು.

ಅಧ್ಯಕ್ಷರು.—ಹಾಗೆಲ್ಲಾ ಮಧ್ಯದಲ್ಲಿ ಎದ್ದು ಮಾತನಾಡಬೇಡಿ.

ಶ್ರೀ ಆರ್. ಎನ್. ನಾಯಕ್.—ಜಿಲ್ಲಾ ಪರಿಷತ್ ಅಧ್ಯಕ್ಷರು ಬಂದು ತೆರೆಯಿಸಿದಾಗ ನೀರು ಬರಲಿಲ್ಲ ಎಂದರೆ ಇದಕ್ಕೆ ಏನು ಹೇಳಬೇಕು ?

ಅಧ್ಯಕ್ಷರು.—ಈಗ ಏನಾಗಬೇಕು ಕೇಳಿ.

ಶ್ರೀ ಆರ್. ಎನ್. ನಾಯಕ್.—ಜಿಲ್ಲಾ ಪರಿಷತ್ ಅಧ್ಯಕ್ಷರು ನಿಮಗೆ ಈ ವಿಚಾರ ಹೇಳಲಿಲ್ಲವೇ? ಬೇರೆ ಬಾಕಿ ಎಲ್ಲಾ ವಿಚಾರ ಅವರು ಹೇಳುತ್ತಾರೆ, ಆದರೆ ಮಂಕಿಯಲ್ಲಿ ನೀರು ಸರಬರಾಜು ಯೋಜನೆಯನ್ನು ಉದ್ಘಾಟಿಸಿದ್ದಿನಲ್ಲಿ ತಿರುಗಿಸುವುದಕ್ಕೆ ಹೋದೆ ನೀರೇ ಬರಲಿಲ್ಲ, ಇದರ ಬಗ್ಗೆ ಎನ್‌ಕ್ವೈರಿ ಮಾಡಿಸಿ ಎಂದು ಹೇಳಲಿಲ್ಲವೇ? ಜಿಲ್ಲಾ ಪರಿಷತ್ ಅಧ್ಯಕ್ಷರು, ಕಾರವಾರ ಇವರು ಉದ್ಘಾಟಿಸಿ ನೀರು ಸರಬರಾಜು ಯೋಜನೆಯಲ್ಲಿ ನೀರು ಬರಲಿಲ್ಲ, ಇದರ ಬಗ್ಗೆ ಎನ್‌ಕ್ವೈರಿ ಮಾಡಿ ರಿಪೋರ್ಟ್ ಮಾಡಿ ಎಂದು ತಾವು ಹೇಳಲಿಲ್ಲವೇ ? ಬರೀ ಎನ್‌ಕ್ವೈರಿ ಮಾಡುವುದಷ್ಟೇ ಅಲ್ಲ, ಅವರನ್ನು ಸಸ್ಪೆಂಡ್ ಇಟ್ಟು ಎನ್‌ಕ್ವೈರಿ ಮಾಡಬೇಕು. ಇದಕ್ಕೆ ಏನು ಹೇಳುತ್ತೀರಿ ಹೇಳಿ.

ಶ್ರೀ ಆರ್. ವಿ. ದೇಶಪಾಂಡೆ.—ಯಾವುದೇ ಒಂದು ವ್ಯಕ್ತಿಯ ಮೇಲೆ ಆಪಾದನೆ ಮಾಡುವುದು ಸುಲಭ ಇದೆ. ಈ ಕೆಲಸ ಮಂಜೂರಾಗಿದ್ದು ೧೯೭೪ನೇ ಇಸವಿಯಲ್ಲಿ. ಅವರ ಹೆಸರು ಅಂಕೋಲೆಕರ್ ಎಂದು ಹೇಳಿದ ಮೇಲೆ ನನಗೆ ನೆನಪಾಯಿತು. ಅವರು ಹೊನ್ನಾವರಕ್ಕೆ ಹೋಗಿ ೮–೧೦ ತಿಂಗಳಾಗಿದೆ. ಈ

ಕೆಲಸ ಶುರುವಾದುದು ೧೯೭೪ನೇ ಇಸವಿಯಲ್ಲಿ. ಆದುದರಿಂದ ಇವರ ಮೇಲೆ ಆಪಾದನೆ ಮಾಡುವುದು ಸರಿಯಲ್ಲ. ಆಪಾದನೆ ಮಾಡುವುದು ಬೇಡ ಎಂದು ಏನು ಹೇಳುವುದಿಲ್ಲ, ಆಪಾದನೆ ಮಾಡುವುದಿದ್ದರೆ ಮಾಡಲಿ, ಅದು ಅವರ ಕರ್ತವ್ಯ, ಆಪಾದನೆ ಮಾಡಬೇಕು ಹಾಗೂ ನನ್ನ ಗಮನಕ್ಕೆ ತರಬೇಕು. ಅದು ಅವರ ಕರ್ತವ್ಯ ಇದೆ. ನಿನ್ನೆ ದಿನ ಟಿ.ಎಂ. ಹೆಗಡೆ ಎಂಬುವವರ ಬಗ್ಗೆ ಇದೇ ರೀತಿ ಆಪಾದನೆ ಮಾಡಿದರು. ಅವರು ಪ್ರಾಮಾಣಿಕ ಮನುಷ್ಯ, ಅವರಿಗೆ ೬೫ ವರ್ಷ ವಯಸ್ಸಾಗಿದೆ, ಅವರ ಪ್ರಾಮಾಣಿಕತೆ ಹಾಗೂ ಇಂಟಿಗ್ರಿಟಿ ಬಗ್ಗೆ ನಮಗೆ ಗೊತ್ತಿದೆ. ಅವರು ರಿಟೈರ್ಡ್‌ಟೀಚರ್ ಇದ್ದಾರೆ. ಅವರ ಮೇಲೆ ಸಹ ಆಪಾದನೆ ಮಾಡಿದರು.

ಶ್ರೀ ಗೋಪಾಲ ಮುಕುಂದ ಕಾನಡೆ.—ಅವರ ಮೇಲೆ ಆಪಾದನೆ ಮಾಡಿದ್ದು.....

ಅಧ್ಯಕ್ಷರು.—ಕಾನಡೆಯವರೇ ನೀವು ಏನು ಹೇಳಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ನಾಯಕ್‌ರವರು ನಮ್ಮ ಜಿಲ್ಲೆಯವರು. ಇವರೂ ಅವರು ಒಂದೇ ಜಿಲ್ಲೆಯವರು. ಅವರು ನನ್ನ ಮಿತ್ರರೂ. ಯಾವುದೇ ಸಮಸ್ಯೆ ಇದ್ದಾಗ ಅದನ್ನು ನನ್ನ ಗಮನಕ್ಕೆ ತರುತ್ತಾರೆ. ಈ ಸಮಸ್ಯೆ ನನ್ನ ಗಮನಕ್ಕೆ ಬಂದಿಲ್ಲ. ನಾನು ರೂರಲ್ ಡೆವೆಲಪ್‌ಮೆಂಟ್ ಮಿನಿಸ್ಟರ್ ಆದಮೇಲೆ ಇದು ನನ್ನ ಗಮನಕ್ಕೆ ಬಂತು. ಒಂದು ವೇಳೆ ಆ ಅಧಿಕಾರಿ ತಪ್ಪಿತಸ್ಥರಾಗಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಮೊದಲನೇ ದಿನ ಅಲ್ಲಿ ತೊಂದರೆ ಆಯಿತು, ವಾಟರ್ ಸಪ್ಲೈ ಆಗಲಿಲ್ಲ. ನೆಕ್ಸ್ಟ್ ಡೇಯಿಂದ ಅಲ್ಲಿ ವಾಟರ್ ಸಪ್ಲೈ ನಡೆಯುತ್ತಿದೆ.

ಇವತ್ತು ನಾನು ಬಂದು ಭರವಸೆಯನ್ನು ಕೊಡುತ್ತೇನೆ. ಅಧಿಕಾರಿಯು ಲೋಪದೋಷವಿದ್ದರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇನೆ. ಅದಕ್ಕೆ ಸರ್ಕಾರ ಹಿಂಜರಿಯುವುದಿಲ್ಲ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ಸಾಕು ಕುಳಿತುಕೊಳ್ಳಿ.

ಶ್ರೀ ಆರ್. ಎನ್. ನಾಯಕ್.—ಹಾಗಲ್ಲ ಅಧ್ಯಕ್ಷರೇ ನಾನು ಟಿ.ಎಂ. ಹೆಗಡೆಯವರ ಬಗ್ಗೆ ನಿನ್ನೆ ಮಾತನಾಡಿದ್ದೆ. ಅವರು ಈಗ ಆ ವಿಷಯವನ್ನು ಎತ್ತಿದ್ದಾರೆ. ಅದಕ್ಕೆ ನಾನು ಉತ್ತರ ಹೇಳಬೇಕಾಗುತ್ತದೆ. ಅವಕಾಶ ಕೊಡಿ, ಮಾನ್ಯ ಮಂತ್ರಿಗಳು ಅವರು ಪ್ರಾಮಾಣಿಕರೆಂದು ಹೇಳಿದರು. ಸ್ವಾಮಿ ಅವರು ಕಳೆದ ವರ್ಷ ಡಿ.ಡಿ.ಪಿ.ಐ. ಆಫೀಸಿಗೆ ಹೋಗಿ ಟ್ರಾನ್ಸ್‌ಫರ್ಸ್ ಮಾಡಿಸಿದ್ದಾರೆ. ಅದರಲ್ಲಿ ಏನಾಗಿದೆ ಎಂದು ಹೇಳುತ್ತೇನೆ....

ಅಧ್ಯಕ್ಷರು.—ಅದು ಬೇಡ ಕೂಡ್ರಿ.

ಶ್ರೀ ಆರ್. ಎನ್. ನಾಯಕ್.—ಅವರು ಹೇಳಬಹುದು ನಾವು ಹೇಳಬಾರದೇನು ? ಇದೇ ಏನಾಗುತ್ತದೆ ಸಾರ್ವಜನಿಕರ ಮನಸ್ಸಿನಲ್ಲಿ ಆರ್. ಎನ್. ನಾಯಕ್‌ರವರು ಸಭೆಯಲ್ಲಿ ತಪ್ಪು ಆರೋಪಗಳನ್ನು ಮಾಡುತ್ತಾರೆ, ಸುಳ್ಳು ಆರೋಪಗಳನ್ನು ಮಾಡುತ್ತಾರೆಂದು ಆಗುತ್ತದೆ. ಅದಕ್ಕೆ ನಾನು ಅವರೇನು ಮಾಡಿದ್ದಾರೆಂದು ಹೇಳುತ್ತೇನೆ. ನಾನು ಆರೋಪ ಮಾಡಿ ಪ್ರೂವ್ ಮಾಡುತ್ತೇನೆ. ಇಲ್ಲದಿದ್ದರೆ ನೀವು ಪ್ರೂವ್ ಮಾಡುತ್ತೀರಾ ? ಅವರು ಸುಮಾರು ೫೦೦ ಜನರಿಗಿಂತಲೂ ಹೆಚ್ಚು ಜನರನ್ನು ಟ್ರಾನ್ಸ್‌ಫರ್ ಮಾಡಿಸಿದ್ದಾರೆ. ಅವರು ಅಂಕೋಲಕ್ಕೆ ಎಷ್ಟು ಜನರನ್ನು ತಮ್ಮ ಸ್ವಂತ ಸಂಬಂಧಿಕರನ್ನು ವರ್ಗಾವಣೆ ಮಾಡಿಸಿದ್ದಾರೆ ? ನೂರು ಜನರಿಗಿಂತ ಹೆಚ್ಚು ಜನರನ್ನು ವರ್ಗಾವಣೆ ಮಾಡಿಸಿದ್ದಾರೆ. ಪಟ್ಟಿ ಕೊಡಲೇನು ? ನನ್ನ ಹತ್ತಿರ ಲಿಸ್ಟ್ ಇದೆ. ಅದನ್ನು ನಾನು ನಿನ್ನೆ ಏತಕ್ಕೆ ಹೇಳಲಿಲ್ಲವೆಂದರೆ ಅದು ಬೇರೆ ವಿಚಾರ. ಅವರು ಸ್ವಜನ ಪಕ್ಷಪಾತ ಮಾಡಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಟಿ.ಎಂ. ಹೆಗಡೆಯವರು ಏನು ಮಾಡಿದ್ದಾರೆಂದು ತನಿಖೆ ಮಾಡಲಿ. ಆಗ ಗೊತ್ತಾಗುತ್ತದೆ. ನಾನು ಅವರ ಮೇಲೆ ಆರೋಪ ಮಾಡಿ ಹಣ ಹೊಡೆದಿದ್ದಾರೆಂದು ಹೇಳಲಿಲ್ಲ. ಹೇಳುವ ಟೈಮ್ ಬಂದಾಗ ನಾನು ಹೇಳುತ್ತೇನೆ. ಅವರು ಡಿ.ಡಿ.ಪಿ.ಐ. ಆಫೀಸಿನಲ್ಲಿ ಸುಮಾರು ೧೫–೨೦ ದಿವಸ ಇದ್ದು ಅಲ್ಲಿಗೆ ಜಿ.ಕೆ.ಪಾಟೀಲ ಪ್ರೌಢಶಾಲಾ ಇನ್ಸ್‌ಪೆಕ್ಟರ್ಸ್‌ರವರನ್ನು ಕರೆದುಕೊಂಡು ಹೋಗಿ ತಮಗೆ ಬೇಕು ಬೇಕಾದವರನ್ನು, ಬೇಕು ಬೇಕಾದಸ್ಥಳಕ್ಕೆ ವರ್ಗಾವಣೆ ಮಾಡಿಸಿದ್ದಾರೆ.

ಶ್ರೀ ಡಿ. ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೇ ಇದೇನು ಗಮನ ಸೆಳೆಯುವ ಸೂಚನೆಯಲ್ಲಿ ಬರುವ ವಿಷಯವೇ ? ಗಮನ ಸೆಳೆಯುವ ಸೂಚನೆಯಲ್ಲಿ ಏನಿದೆಯೋ ಅದನ್ನು ಹೇಳಬೇಕು

೧–೦೦ ಪಿ. ಎಂ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳಿದ್ದಾರೆ ಅವರು ಉತ್ತರ ಕೊಡುತ್ತಾರೆ ತಾವು ಕುಳಿತುಕೊಳ್ಳಿ.

ಶ್ರೀ ಆರ್. ಎನ್. ನಾಯಕ್.—ಅವರಿಗೆ ಬೇಕು ಬೇಕಾದವರನ್ನು ವರ್ಗಾ ಮಾಡಿದ್ದಾರೆ. ಅವರು ಜಿಲ್ಲಾ ಪರಿಷತ್ತಿನ ಸದಸ್ಯರು. ಶಿಕ್ಷಣ ಸ್ಥಾಯಿ ಸಮಿತಿಯ ಅಧ್ಯಕ್ಷರು. ಆದ್ದರಿಂದ ಡಿ.ಡಿ.ಪಿ.ಐ. ಆಫೀಸಿಗೆ ಹೋಗಿ... .

Sri Ramesh Kumar.—It cannot be your fantasy to conduct the House. Is it the subject matter for calling attention ?

ಅಧ್ಯಕ್ಷರು.—ಮಾನ್ಯ ಮಂತ್ರಿಗಳೇ ಆ ಸಬ್ಜೆಕ್ಟ್ ಎತ್ತಿದರು.

ಶ್ರೀ ರಮೇಶ್ ಕುಮಾರ್.—ಆ ಬಗ್ಗೆ ಬೇಕಾದರೆ ಪರ್ಸನಲ್ ಎಕ್ಸ್‌ಪ್ಲನೇಷನ್ ಬೇಕಾದರೆ ಕೊಡಲಿ. You have got to go by that procedure.

ಅಧ್ಯಕ್ಷರು.—ಆಯಿತು ನಾಯಕರೇ ಬೇಗ ಮುಗಿಸಿ.

ಶ್ರೀ ಆರ್. ಎನ್. ನಾಯಕ್.—ಇವರು ಡಿ.ಡಿ.ಪಿ.ಐ. ಆಫೀಸಿಗೆ ಹೋಗಿ ಅಲ್ಲಿ ಕುಳಿತುಕೊಂಡು ಅಲ್ಲಿನ ಕಡತಗಳನ್ನೆಲ್ಲಾ ಪರಿಶೀಲನೆ ಮಾಡಿ ವರ್ಗಾವಣೆ ಮಾಡಿದ್ದಾರೆ. ಇದು ಕಾನೂನು ರೀತ್ಯ ಆಗುತ್ತಾ ?

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ನಾಯಕ್‌ರವರು ನನ್ನ ಮಿತ್ರರಿದ್ದಾರೆ. ಅವರು ಮಾತನಾಡುತ್ತಾ ಹಣದ ಭ್ರಷ್ಟಾಚಾರ ಮಾಡಿಲ್ಲವೆಂದು ಹೇಳಿದರು, ನನಗೆ ಬಹಳ ಸಂತೋಷ.

ಶ್ರೀ ಆರ್. ಎನ್. ನಾಯಕ್.—ಭ್ರಷ್ಟಾಚಾರ ಆಗಿದೆ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಭ್ರಷ್ಟಾಚಾರ ಮಾಡಿಲ್ಲವೆಂದು ಅವರೇ ಒಪ್ಪಿಕೊಂಡಿದ್ದಾರೆ.

ಶ್ರೀ ಆರ್. ಎನ್. ನಾಯಕ್.—ನಾನು ನಿನ್ನೆ ಹೇಳಿದ್ದ ಇವತ್ತು ಹೇಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ ನಾನು ಇನ್ನೊಂದು ಪ್ರಶ್ನೆಯನ್ನು ಮಾನ್ಯ ಸದಸ್ಯರನ್ನು ಕೇಳುತ್ತೇನೆ, ಅವರು ಈ ವಿಷಯವನ್ನು ಜಿಲ್ಲಾ ಪರಿಷತ್ ನಿಂಟಿಂಗ್‌ನಲ್ಲಿ ಏತಕ್ಕೆ ರೈಜ್ ಮಾಡುವುದಿಲ್ಲ. ಅವರಿಗೆ ಅಲ್ಲಿ ರೈಜ್ ಮಾಡುವುದಕ್ಕೆ ಅಧಿಕಾರ ಇದೆ. ಅವರ ಪಕ್ಷದ ಸದಸ್ಯರಾಗಿ ಅಲ್ಲೂ ಬಹಳ ಇದ್ದಾರೆ. ಆದರೆ ಅಲ್ಲಿ ರೈಜ್ ಮಾಡಿಲ್ಲ. ಶ್ರೀಮಾನ್ ಟಿ. ಎಂ. ಹೆಗಡೆಯವರು ಶಿಕ್ಷಣ ಸ್ಥಾಯಿ ಸಮಿತಿ ಅಧ್ಯಕ್ಷರು. ನಾನು ಒಂದು ಮಾತನ್ನು ಹೆಮ್ಮೆಯಿಂದ ಹೇಳುತ್ತೇನೆ. ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾ ಪರಿಷತ್ತಿನಲ್ಲಿ ವಿರೋಧ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೇವೆ ಅಲ್ಲಿ ಯಾವುದೇ ರೀತಿಯ ಗಲಾಟೆ, ಗಲಭೆ ಇಲ್ಲ. ಜಿಲ್ಲಾ ಪರಿಷತ್ತು ಚೆನ್ನಾಗಿ ನಡೆಯುತ್ತಿದೆ. ಅದು ಒಂದು ಆದರ್ಶ ಜಿಲ್ಲಾ ಪರಿಷತ್ತಾಗಿ ನಡೆಯುತ್ತಿದೆ. ನಾವೆಲ್ಲ ಮೆಚ್ಚಬೇಕು ಇಂತಹ ಪರಿಸ್ಥಿತಿಯಲ್ಲಿ ಇವತ್ತು ಒಂದು ಆರೋಪ ಮಾಡುವುದು ಸರಿಯಲ್ಲ. ಅವರೊಬ್ಬ ಹಿರಿಯ ಶಿಕ್ಷಕರಾಗಿ ನಿವೃತ್ತಿಯಾಗಿರುವವರು. ಅವರು ಈ ವರ್ಗವರ್ಗಿಗಳು ಚೆನ್ನಾಗಿ ಆಗಬೇಕೆಂದು ಹೇಳಿ ಒಂದು ನಾರಮ್ಸ್ ಇಟ್ಟುಕೊಂಡು ಬಹಳ ಸ್ಟ್ರಿಕ್ಟ್ ಆಗಿ ಕೆಲಸ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಇನ್ನೊಂದು ವಿಷಯದ ಬಗ್ಗೆ ನಾನು ಲೊ ಪದೋಷವಾಗಿದ್ದರೆ ಕ್ಷಮೆ ತೆಗೆದುಕೊಳ್ಳುತ್ತೇನೆ. ನಾನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ತಪ್ಪಿಗೆ ಅಧಿಕಾರವಿದೆಯೆಂದು ಇಲ್ಲಿ ದಿಫೆಂಡ್ ಮಾಡಿಕೊಳ್ಳಲಾರದವರ ಬಗ್ಗೆ ಆರೋಪ ಮಾಡುವುದು ಸರಿಯಲ್ಲ. ಈ ರೀತಿ ಆರೋಪ ಮಾಡುತ್ತಾ ಹೋದರೆ ಹೇಗೆ ?

ಶ್ರೀ ಆರ್. ಎನ್. ನಾಯಕ್.—ನಾನೇನು ತಪ್ಪು ಆರೋಪ ಮಾಡಿಲ್ಲ. ನಾನು ಇವತ್ತು ಹೇಳುತ್ತೇನೆ...

MR. SPEAKER.—Nothing will be go on record. The matter is closed. I will not allow you. Nothing will be recorded. xxx

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಲ್ಲಿ ಇರುವ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನೀಯರ್ ರವರು ಏನು ತಪ್ಪು ಮಾಡಿದ್ದಾರೋ ಅದನ್ನು ತನಿಖೆ ಮಾಡುವುದಕ್ಕೆ ಉಪ ಲೋಕಾಯುಕ್ತಕ್ಕೆ ರೆಫರ್ ಮಾಡುತ್ತೀರಾ ? ಏಕೆಂದರೆ ಮಾನ್ಯ ಸದಸ್ಯರು ಅಲ್ಲಿ ಕಳಪೆ ಕೆಲಸವಾಗಿದೆ ಎಂದು ಹೇಳಿದ್ದಾರೆ. ಯಾವ ರೀತಿ ಕೆಲಸ ಆಗಿದೆ, ಎಷ್ಟು ಮಿಸ್ ಅಪ್ರೊಪ್ರಿಯೇಟ್ ಆಗಿದೆ, ಎಸ್ಟಿಮೇಟ್ ಪ್ರಕಾರ ಕೆಲಸ ಆಗಿದೆಯೇ ಎಂಬುವನ್ನು ತನಿಖೆ ಮಾಡಿಸಿ. ತಪ್ಪು ಮಾಡಿರುವ ಇಂಜಿನಿಯರ್ ಮೇಲೆ ಡೈರೆಕ್ಟ್ ಆಗಿ ಆ್ಯಕ್ಷನ್ ತೆಗೆದುಕೊಳ್ಳುತ್ತೀರಾ ? ನೀವು ಆ್ಯಕ್ಷನ್ ತೆಗೆದುಕೊಳ್ಳುವುದಕ್ಕೆ ಆಗದೇ ಇದ್ದರೆ ಅದನ್ನು ಉಪ ಲೋಕಾಯುಕ್ತಕ್ಕೆ ರೆಫರ್ ಮಾಡುತ್ತೀರಾ ಎಂಬುದನ್ನು ಹೇಳಿ.

ಶ್ರೀ ಆರ್. ವಿ. ದೇಶಪಾಂಡೆ.—ನಾನು ಸ್ಪಷ್ಟವಾಗಿ ಹೇಳುತ್ತೇನೆ. ಅಲ್ಲಿ ಕಳಪೆ ಕೆಲಸ ಆಗಿಲ್ಲ. ಈ ಕೆಲಸ ೧೯೮೪ರಲ್ಲೇ ಪ್ರಾರಂಭವಾಗಿದೆ. ಇವರು ಹೇಳಿರುವ ಆಫೀಸರ್‌ರವರು ಅಲ್ಲಿಗೆ ಹೋಗಿ ಎಂಟು ಹತ್ತು ತಿಂಗಳುಗಳು ಮಾತ್ರ ಆಗಿದೆ. ಆದರೂ, ಆಫೀಸರ್ ಮೇಲೆ ಮಾನ್ಯ ಸದಸ್ಯರು ಆಪಾದನೆ ಮಾಡುತ್ತಿದ್ದಾರೆ. ಆ ಬಗ್ಗೆ ವಿಚಾರ ಮಾಡುತ್ತೇನೆ. ಒಂದು ವೇಳೆ ಆ ಅಧಿಕಾರಿ ತಪ್ಪು ಮಾಡಿದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ.

ಶ್ರೀ ಆರ್, ಎನ್, ನಾಯಕ್ —ಅದು ಏನಾಗಿದೆ ಎಂದರೆ,

ಅಧ್ಯಕ್ಷರು.—ಮ್ಯಾಟರ್ ಈಸ್ ಕ್ಲೋಸ್ಡ್. ನಥಿಂಗ್ ವಿಲ್ ಬಿ ರೆಕಾರ್ಡೆಡ್.

(ಗೊಂದಲ)

ಅಧ್ಯಕ್ಷರು.—ನಥಿಂಗ್ ವಿಲ್ ಬಿ ರೆಕಾರ್ಡೆಡ್. Subject is closed Nothing will be recorded.

(ಗೊಂದಲ)

ಅಧ್ಯಕ್ಷರು.—ನಥಿಂಗ್ ವಿಲ್ ಬಿ ರೆಕಾರ್ಡೆಡ್. ನೀವೂ ಸಮರ್ಪಕವಾಗಿ ಕೇಳಿದ್ದೀರಿ. ಅವರೂ ಸಮರ್ಪಕವಾಗಿ ಉತ್ತರ ಕೊಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಸದಸ್ಯರೆ, ಇದನ್ನು ಸ್ವತಃ ನೋಡಿದ್ದಾರೆ ಕಳಪೆ ಕೆಲಸ ಆಗಿದೆಯೆಂದು ಹೇಳುತ್ತಿದ್ದಾರೆ. ಇದರ ಬಗ್ಗೆ ವಿಚಾರಣೆ ಮಾಡಿಸುತ್ತೇವೆಂದು ಹೇಳಿದರೆ ಏನು ತಪ್ಪಾಗುತ್ತದೆ ? ಅದನ್ನು ಉಪ ಲೋಕಾಯುಕ್ತಕ್ಕೆ ರೆಫರ್ ಮಾಡಿ.

ಶ್ರೀ ಆರ್. ವಿ. ದೇಶಪಾಂಡೆ.—ಇದರಲ್ಲಿ ಕಳಪೆ ಕೆಲಸ ಆಗಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇವರೇ ಅಲ್ಲಿ ಕಳಪೆ ಕೆಲಸ ಆಗಿಲ್ಲವೆಂದು ಅವರನ್ನು ಡಿಫೆಂಡ್ ಮಾಡಿಕೊಂಡರೆ ಹೇಗೆ ?

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ ಖರ್ಗೆ ಸಾಹೇಬರು ಹೇಳುವ ಹಾಗೆ ನಾನು ಅವರನ್ನು ಡಿಫೆಂಡ್ ಮಾಡಿಕೊಳ್ಳುತ್ತಿಲ್ಲ, ಅಲ್ಲಿ ಕಳಪೆ ಕೆಲಸ ಆಗಿಲ್ಲವೆಂದು ನಮಗೆ ಇನ್‌ಫರ್ಮೇಷನ್ ಬಂದಿದೆ. ಆದರಂತೆ ನಾನು ಹೇಳುತ್ತಿದ್ದೇನೆ.

SRI M. MALLIKARJUNA KHARGE.—When the Member brings it to your notice you have to do it.

ಶ್ರೀ ಆರ್. ವಿ. ದೇಶಪಾಂಡೆ —ಕೆಲಸ ಆಗಿಲ್ಲವೆಂದರೂ ಕೂಡ ವಿಚಾರಣೆ ಮಾಡಿಸಿ ಎಂದು ಅವರು ಹೇಳಿದ್ದಾರೆ. ವಿಚಾರಣೆಯನ್ನು ಮಾಡಿಸುತ್ತೇವೆಂದು ಹೇಳುತ್ತೇನೆ.

ಅಧ್ಯಕ್ಷರು.—ರಾಜೂಗೌಡರೇ ತಾವು ಕೇಳಿ.

---

x ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ರೆಕಾರ್ಡ್ ಮಾಡಲಿಲ್ಲ.